ಗೌರವಾನ್ವಿತ **3** ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ
ಬೆಳಗಾವಿ.

**ಓ.ಎಸ್ ನಂಃ 557 ಃ 2010**

**ಡಿ. ಡಬ್ಲ್ಯೂ- 1**

ದಿ. 29-11-2017 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

**ಮುಂದುವರೆದ ಪಾಟೀ ಸವಾಲುಃ ಶ್ರೀ. ಎ.ಐ.ಜೆ . ವಕೀಲರಿಂದ ಃ-**

2. ಸರ್ವೆ ನಂ.222/1 ಒಟ್ಟು 31 ಗುಂಟೆ ವಿಸ್ತೀರ್ಣವಿದ್ದು ಅ, ಬ , ಕ, ಡ , ಇ ಎಂದು 5 ಹಿಸ್ಸೆ ಮಾಡಿಕೊಂಡಿದ್ದೆವು ಅಂದರೆ ಸರಿಯಲ್ಲ. ನಿಪಿ-2 ರಲ್ಲಿ ಈ ವಿಚಾರವು ಕಂಡು ಬರುತ್ತದೆ ಅಂದರೆ ನನಗೆ ತಿಳಿದಿಲ್ಲ. ಸದರಿ ಅಪೀಲಿನಲ್ಲಿ ಸಬ್ ಡಿವಿಷನ್ ಕ್ಯಾನ್ಸಲ್ ಮಾಡಿ ಮರು ಸರ್ವೆ ಮಾಡಲು ಆದೇಶ ಮಾಡಲು ತಿಳಿಸಿತ್ತು ಅಂದರೆ ನನಗೆ ತಿಳಿದಿಲ್ಲ. ವಾದಿಯು ದಾವೆಯಲ್ಲಿ ಯಾವ ಕಾಗದ ಪತ್ರವನ್ನು ಹಾಜರುಪಡಿಸಿದ್ದಾರೆ ನನಗೆ ತಿಳಿದಿಲ್ಲ ನಿಪಿ-1 ವಾದಿಯು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದಾರೆ ನನಗೆ ತಿಳಿದಿಲ್ಲ. ದಾವ ಸ್ವತ್ತು ಸರ್ವೆ ನಂ.222 ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ತಿಳಿದಿಲ್ಲ. ಸರ್ವೆ ನಂ.222 ರಲ್ಲಿ ಒಟ್ಟು 7 ಹಿಸ್ಸೆ ಆಗಿದ್ದವು ಅಂದರೆ ನನಗೆ ತಿಳಿದಿಲ್ಲ. ನನ್ನ ತಂದೆಯ ಕಾಲದಿಂದಲೂ ಮಾಡಿರಬಹುದು ನನಗೆ ತಿಳಿದಿಲ್ಲ. ಅದರಲ್ಲಿ ಹಿಸ್ಸೆ ನಂ.5 ವಾದಿ ಮತ್ತು ಪ್ರತಿವಾದಿಗೆ ಸೇರಿಸಿ ಧಾರ್ಮಿಕ ಕಾರ್ಯಗಳನ್ನು ಮಾಡಲು ಬಿಡಲಾಗಿತ್ತು ಅಂದರೆ ಸರಿ. ಹಿಸ್ಸೆ ನಂ.1 ನ್ನು ಮೊದಲು ವಾದಿ ಮತ್ತು ಪ್ರತಿವಾದಿಗೆ ಇಡಲಾಗಿದ್ದು ನಂತರದಲ್ಲಿ ವಿಭಾಗವಾಗಿರುತ್ತದೆ ಅಂದರೆ ನನಗೆ ತಿಳಿದಿಲ್ಲ.

3. ಸರ್ವೆ ನಂ.222/1 ರ ಮಾಲೀಕರು ಯಾರು ಎಂದು ನನಗೆ ತಿಳಿದಿಲ್ಲ. ದಾವ ಹೂಡಿದ ನಂತರ ಅದರ ಮಾಲೀಕ ಯಾರು ಎಂದು ಉತಾರವನ್ನು ತೆಗೆಸಿ ನೋಡಿರುವುದಿಲ್ಲ. ಸರ್ವೆ ನಂ.222/1 ರಲ್ಲಿ ನಾವು ಎಷ್ಟು ಹಿಸ್ಸೆ ಮಾಡಿಕೊಂಡಿದ್ದೇವೆ

ಎಂದು ನನಗೆ ತಿಳಿದಿಲ್ಲ. ಸರ್ವೆ ನಂ.222/1 ರಲ್ಲಿ ನಮ್ಮ ತಂದೆ ಅವರ ಸಹೋದರರ ಹಿಸ್ಸೆ ಇದೆ ಅಂದರೆ ನನಗೆ ತಿಳಿದಿಲ್ಲ. ಸರ್ವೆ ನಂ.222/1 ಉತ್ತರಕ್ಕೆ 7 ಗುಂಟೆ ದಾಖಲು ಕಾರ್ಲೆಕರ ಅವರಿಗೆ ಸೇರಿದೆ ಅಂದರೆ ನನಗೆ ಗೊತ್ತಿಲ್ಲ. ದಾಖಲು ಕಾರ್ಲೆಕರ ಮರಣ ಹೊಂದಿದ ನಂತರ ಅವರ ಮಕ್ಕಳು ಸ್ವಾಧೀನದಲ್ಲಿದ್ದಾರೆ ಅಂದರೆ ಸರಿಯಲ್ಲ. ಸದರಿ ದಾಖಲು ಕಾರ್ಲೆಕರ ಅವರ ಹಿಸ್ಸೆಯ ದಕ್ಷಿಣದ ಬದಿಗೆ ಯಶವಂತ ಕಾರ್ಲೆಕರ ಸ್ವಾಧೀನದಲ್ಲಿದ್ದಾರೆ ಅಂದರೆ ನನಗೆ ತಿಳಿದಿಲ್ಲ. ಸದರಿ ಯಶವಂತ ಕಾರ್ಲೆಕರ ಮರಣ ಹೊಂದಿದ ನಂತರ ಅವರ ಅವರ ಮಕ್ಕಳು ಸ್ವಾಧೀನದಲ್ಲಿದ್ದಾರೆ ಅಂದರೆ ನನಗೆ ತಿಳಿದಿಲ್ಲ. ಯಶವಂತ ಕಾರ್ಲೆಕರ ಅವರ ಹಿಸ್ಸೆಯ ದಕ್ಷಿಣ ಬದಿಗೆ ಮಹಾದೇವ ಕಾರ್ಲೆಕರ ಅವರ 5 ಹಿಸ್ಸೆ ಇದೆ ಅಂದರೆ ನನಗೆ ತಿಳಿದಿಲ್ಲ. ಮಹಾದೇವ ಕಾರ್ಲೆಕರ ಅವರ ದಕ್ಷಿಣ ಬದಿಗೆ ಗುಂಡೂ ಕಾರ್ಲೆಕರ ಹಿಸ್ಸೆ ಇದೆ ಅಂದರೆ ನನಗೆ ತಿಳಿದಿಲ್ಲ. ಗುಂಡೂ ಕಾರ್ಲೆಕರ ಹಿಸ್ಸೆ ನಮ್ಮದಾಗಿತ್ತು ಅಂದರೆ ನನಗೆ ತಿಳಿದಿಲ್ಲ. ಸರ್ವೆ ನಂ.222/1 ರಲ್ಲಿ ನನ್ನ ತಂದೆಯ ಹಿಸ್ಸೆಗೆ ಸರ್ವೆ ನಂ.222/1(ಇ) ಎಂದು ನಂಬರ್ ನೀಡಲಾಗಿತ್ತು ಅಂದರೆ ನನಗೆ ತಿಳಿದಿಲ್ಲ. ಸರ್ವೆ ನಂ.222/1(ಕ)ಗೆ ನಮ್ಮ ಹೆಸರು ಹಚ್ಚಲಾಗಿದೆ ಅಂದರೆ ನಮ್ಮ ತಂದೆ ಕಾಲದಿಂದಲೂ ಇರುತ್ತದೆ ಎಂದು ನುಡಿಯುತ್ತಾರೆ . ಸರ್ವೆ ನಂ.222/1 ರಲ್ಲಿ ಅ, ಬ , ಕ, ಡ , ಇ ಎಲ್ಲಿ ಬರುತ್ತದೆ ಎಂದು ನನಗೆ ತಿಳಿದಿಲ್ಲ. ದಾವ ಆಸ್ತಿಯಲ್ಲಿ ಮನೆ ಕಟ್ಟುವ ಮೊದಲು ನಮ್ಮ ಹಿಸ್ಸೆ ಎಲ್ಲಿ ಬರುತ್ತದೆ ಎಂದು ಮೋಜಣಿ ಮಾಡಿಸಿರುವುದಿಲ್ಲ. ದಾವ ಸರ್ವೆ ನಂಬರ್ ವಾದಿ ಮತ್ತು ಪ್ರತಿವಾದಿಯ ಸ್ವಾಧೀನದಲ್ಲಿದೆ ಅಂದರೆ ನನಗೆ ತಿಳಿದಿರುವುದಿಲ್ಲ. ದಾವೆ ಹೂಡಿದ ನಂತರವೂ

ತಿಳಿದಿಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ. ದಾವ ಸ್ವತ್ತಿನ ಉತಾರದಲ್ಲಿ ಯಾರ ಹೆಸರಿದಿಂದ ನನಗೆ ತಿಳಿದಿರುವುದಿಲ್ಲ.

4. ನಾನು ಕಟ್ಟಿರುವ ಮನೆ ಯಾವ ಸರ್ವೆ ನಂಬರನಲ್ಲಿ ಇದೆ ಎಂದು ನನಗೆ ತಿಳಿದಿರುವುದಿಲ್ಲ. ಸರ್ವೆ ನಂ.222/1 ರಲ್ಲಿ ಪಶ್ಚಿಮದ ಕಡೆಗೆ ದಕ್ಷಿಣೋತ್ತರವಾಗಿ ಮನೆ ಕಟ್ಟಿರುತೇನೆ ಅಂದರೆ ಸರಿ. ನಾನು ಮನೆ ಕಟ್ಟಲು ಆರಂಬಿಸಿದ ನಂತರ ವಾದಿಯು ತಡೆಯಾಜ್ಞೆ ಪಡೆದಿದ್ದರೂ ಅಂದರೆ ಸರಿ. ಸದರಿ ತಡೆಯಾಜ್ಞೆಯ ನೋಟಿಸು ನನಗೆ ಜಾರಿಯಾಗಿತ್ತು. ತಡೆಯಾಜ್ಞೆ ಪಡೆಯುವ ಮೊದಲೇ ಮನೆ ಕಟ್ಟಿಯಾಗಿತ್ತು. ನಾನು ಈಗ ನೋಡುತ್ತಿರುವ ನಿಪಿ-16 ಮತ್ತು 17 ರಲಿಲರುವ ಮನೆ ನಾನು ಕಟ್ಟಿರುತೇನೆ. ಸದರಿ ಫೋಟೋದಲ್ಲಿರುವ ಮನೆ ನಿರ್ಮಾಣ ಅಂತದಲ್ಲಿದೆ ಅಂದರೆ ಸರಿ. ಆ ವೇಳೆಯಲ್ಲಿ ವಾದಿಯು ತಡೆಯಾಜ್ಞೆ ತಂದಿದ್ದರು ಅಂದರೆ ಸರಿ. ನಿಪಿ-18 ರಂತೆ ನಾವು ಗಡಿಬಿಡಿಯಲ್ಲಿ ಮನೆ ಕಟ್ಟಿ ಮುಗಿಸಿರುತೇವೆ ಅಂದರೆ ಸರಿ. ನ್ಯಾಯಾಲಯದಿಂದ ಆದೇಶ ಬಂದ ನಂತರ ನಾವು ಮನೆ ಕಟ್ಟಿ ಮುಗಿಸಿರುತೇವೆ. 2009 ರಲ್ಲಿ ಮನೆಯನ್ನು ಕಟ್ಟಲು ಆರಂಬಿಸಿದೆ ಎಂದು ತೋರಿಸಲು ಯಾವುದೇ ದಾಖಲ ಇಲ್ಲ ಮತ್ತು ಯಾವುದೇ ಅನುಮತಿಯನ್ನು ಪಡೆದಿಲ್ಲ. ಈ ದಾವೆಯನ್ನು ಹಾಕುವ ಮೊದಲು ನಮ್ಮ ಮನೆ ಲಿಂಟಲ್ ಲೆವಲ್ ಇತ್ತು ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ. ಸರ್ವೆ ನಂ.222/1 ವಾದಿ ಮತ್ತು ಪ್ರತಿವಾದಿಗಳಿಗೆ ಎಲ್ಲಾರಿಗೂ ಸೇರಿದ್ದು ಆದರೆ ನಾನು ಜೋರಿನಿಂದ ವಿಭಜನೆ ಮಾಡಿಕೊಳ್ಳದೆ ಮನೆ ಕಟ್ಟಿರುತೇನೆ ಅಂದರೆ ಸರಿಯಲ್ಲ. ನ್ಯಾಯಾಲಯದ ಆದೇಶವಿದ್ದರೂ ಅದನ್ನು ತಿರಸ್ಕರಿಸಿ ಮನೆ ಕಟ್ಟಿದ್ದೇನೆ ಅಂದರೆ ಮಾನ್ಯ ಮಾಡಿ ಮನೆ ಕಟ್ಟಿರುತೇನೆ ಎಂದು ನುಡಿಯುತ್ತಾರೆ .

5. ನಾನು ಮನೆಕಟ್ಟುವ ಸಂದರ್ಭದಲ್ಲಿ ನನ್ನ ಅಣ್ಣತಮ್ಮಂದಿರ ನಡುವೆ ತಕರಾರು ಇಲ್ಲ ಎಂದು ಯಾವುದೇ ದಾಖಲೇ ಮಾಡಿಸಿಕೊಂಡಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಮನೆ ಕಟ್ಟಲು ಅಣ್ಣತಮ್ಮಂದಿರೊಂದಿಗೆ ವಿಚಾರ ಮಾಡಿ ಮನೆ ಕಟ್ಟಿದ್ದೇನೆ ಎಂದು ನಮೂದಿಸಿದ್ದೇನೆ ಅಂದರೆ ಅದು ಸರಿಯಲ್ಲ ನನ್ನ ಪ್ರಮಾಣ ಪತ್ರದಲ್ಲಿ ಏನು ಬರದಿದೆ ಎಂದು ನನಗೆ ತಿಳಿದಿಲ್ಲ ನನ್ನ ಪ್ರಮಾಣ ಪತ್ರ ಸಲ್ಲಿಸಲು ಯಾರ ಮಾಹಿತಿ ಕೊಟ್ಟರು ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ. ಅದನ್ನು ನಾನು ಓದಿ ನೋಡಿಲ್ಲ. ನನ್ನ ವಕೀಲರು ಸ್ವಲ್ಪ ವಿಚಾರವನ್ನು ಮಾತ್ರ ನನಗೆ ತಿಳಿಸಿರುತ್ತಾರೆ . ಸರ್ವೆ ನಂ.222/1 ರಲ್ಲಿ ವಾದಿಯವರ ಹಿಸ್ಸೆ ಇದೆಯೋ ಇಲ್ಲವೋ ನನಗೆ ತಿಳಿದಿಲ್ಲ. ದಾವ ಸ್ವತ್ತಿನ ಬಗ್ಗೆ ನನಗೆ ಮಾಹಿತಿಯಿಲ್ಲ ಅಂದರೆ ಸರಿ. ದಾವ ಸ್ವತ್ತಿನಲ್ಲಿ ಯಾರ ಹಿಸ್ಸೆಗಳು ಇವೆ ಎಂದು ನನಗೆ ತಿಳಿದಿಲ್ಲ. ದಾವೆ ಹೂಡುವ ಮೊದಲೇ ಲಿಂಟಲ್ ಲೆವಲಗೆ ಬಂದಿತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿಗಳ ಹಿಸ್ಸೆಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

( ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ .

3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,
ಬೆಳಗಾವಿ.